2. ಮೀನುಗಾರಿಕೆ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ವಸ್ತು ಪ್ರದರ್ಶನ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
3. ಶುಚಿತ್ವವನ್ನು ಕಾಪಾಡಿಕೊಂಡು ಮೀನು ಮಾರಾಟ ಮಾಡಲು ಶಾಖಿ ನಿರೋಧಕ ಪೆಟ್ಟಿಗೆ ಮತ್ತು ಬೈಸಿಕಲ್ ಖರೀದಿಗಾಗಿ ಸಹಾಯಧನ ನೀಡುವುದು.
4. ಪರಿಶಿಷ್ಟ ಜಾತಿ ಮೀನುಗಾರರಿಗೆ ಒಳನಾಡು ಮೀನುಗಾರಿಕೆಯಲ್ಲಿ ತರಬೇತಿ ನೀಡಿ ಮೀನುಗಾರಿಕೆ ಸಲಕರಣೆ ಖರೀದಿಸಲು ಸಹಾಯಧನ ನೀಡುವುದು.
5. ಸಾರ್ವಜನಿಕರ ಮನರಂಜನೆ ಮತ್ತು ತಿಳುವಳಿಕೆಗಾಗಿ ಮತ್ಸ್ಯಾಲಯ ಸ್ಥಾಪನೆ ಮತ್ತು ನಿರ್ವಹಣೆ ಮಾಡುವುದು.
6. ವಸತಿ ರಹಿತ ಮೀನುಗಾರರಿಗೆ ಮತ್ಸ್ಯ ಆಶ್ರಯ ಯೋಜನೆಯಡಿ ಮನೆ ನಿರ್ಮಾಣ ಮಾಡಲು ಆರ್ಥಿಕ ಸಹಾಯ ನೀಡುವುದು.

ಅ) 2003–04ನೇ ಸಾಲಿನಲ್ಲಿ, 128 ಜನ ಹಾಗೂ 2004–05ನೇ ಸಾಲಿನಲ್ಲಿ, 81 ಜನ ಫಲಾನುಭವಿಗಳಿಗೆ ಈ ಯೋಜನೆಗಳ ಮೂಲಕ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿದೆ.

ಇ) ಜಿಲ್ಲೆಯಲ್ಲಿ, 2004–05ನೇ ಸಾಲಿನಲ್ಲಿ, ರಾಜ್ಯ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಡಿಯಲ್ಲಿ ಒಟ್ಟು ರೂ. 12.86 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

5728. (6628) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) :– ಮಾನ್ಯ ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು, ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿ ಪುರಸಭೆ, ನಗರಸಭೆ ಹಾಗೂ ಮಹಾನಗರ ಸಭೆಗಳನ್ನು ನಿರ್ಧರಿಸುವಾಗ ಅನುಸರಿಸುವ ಮಾನದಂಡಗಳೇನು;

ಆ) ಅವುಗಳಿಗೆ ನಿಗದಿಗೊಳಿಸಿದ ಜನಸಂಖ್ಯೆಯ ಪ್ರಮಾಣ ಎಷ್ಟು;

ಇ) ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಪುರಸಭೆಗಳು, ನಗರಸಭೆಗಳು ಹಾಗೂ ಮಹಾನಗರ ಸಭೆಗಳು ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

ಈ) ಬಸವಕಲ್ಯಾಣ ಟಿಎಂಸಿ ಯನ್ನು ಸಿಎಂಸಿ ಯನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಅದರ ವಿವರಗಳೇನು;

ಉ) ಬಸವಕಲ್ಯಾಣ ಟಿಎಂಸಿಯನ್ನು ಸಿಎಂಸಿ ಯನ್ನಾಗಿ ಘೋಷಿಸಲು ಸರ್ಕಾರಕ್ಕೆ ಇರುವ ತೊಂದರೆಯೇನು ?

ಊ) ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿರುವ ಸಿಎಂಸಿ ಮತ್ತು ಟಿಎಂಸಿಗಳ ಸಂಖ್ಯೆ ಎಷ್ಟು: (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಎಸ್. ಆರ್. ಮೋರೆ, ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು.

ಅ) ಪುರಸಭೆ, ನಗರಸಭೆ ಹಾಗೂ ಮಹಾನಗರ ಸಭೆಗಳನ್ನು ನಿರ್ಧರಿಸುವಾಗ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು:

1. ಆ ಪ್ರದೇಶದ ಜನಸಂಖ್ಯೆ
2. ಜನಸಾಂದ್ರತೆ
3. ಸ್ಥಳೀಯ ಸಂಸ್ಥೆಗೆ ಬರುವ ವರಮಾನ
4. ಕೃಷಿಯೇತರದಲ್ಲಿ ಉದ್ಯೋಗದ ಅವಶ್ಯಕತೆ

ಪ್ರಕಾರ 3.00 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ನಗರಗಳನ್ನು ಮಹಾನಗರ ಪಾಲಿಕೆಯನ್ನಾಗಿ ಮತ್ತು ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ 1946ರ ಸೆಕ್ಷನ್-3 ರ ಪ್ರಕಾರ 50,000 ದಿಂದ 3.00 ಲಕ್ಷ ಜನಸಂಖ್ಯೆ ಇರುವ ಪ್ರದೇಶಗಳನ್ನು ನಗರಸಭೆಯನ್ನಾಗಿ, ಸೆಕ್ಷನ್-3(2) ರ ಪ್ರಕಾರ 20,000 ದಿಂದ 50,000 ರವರೆಗೆ ಜನಸಂಖ್ಯೆ ಇರುವ ಪ್ರದೇಶಗಳನ್ನು ಪುರಸಭೆಯನ್ನಾಗಿ ಮತ್ತು ಸೆಕ್ಷನ್-349 ರ ಪ್ರಕಾರ 10,000 ದಿಂದ 20,000 ರವರೆಗೆ ಜನಸಂಖ್ಯೆ ಇರುವ ಪ್ರದೇಶಗಳನ್ನು ಪಟ್ಟಣ ಪಂಚಾಯಿತಿ ಎಂದು ಪರಿಗಣಿಸಲು ಅವಕಾಶ ಇರುತ್ತದೆ.

1.	ನಗರ ಸಭೆಗಳು	–	43
2.	ಪುರಸಭೆಗಳು	–	79
3.	ಮಹಾನಗರ ಸಭೆಗಳು	–	7

ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

1. ಬೀದರ್ ಜಿಲ್ಲೆಯಲ್ಲಿ 1 ಸಿ.ಎಂ.ಸಿ. ಮತ್ತು 4 ಟಿ.ಎಂ.ಸಿ. ಗಳಿದ್ದು ಎವರ ಕೆಳಕಂಡಂತಿದೆ.

1.	ಬೀದರ್	–	ಸಿ. ಎಂ. ಸಿ.
2.	ಹುಮ್ನಾಬಾದ್	–	ಟಿ. ಎಂ. ಸಿ
3.	ಬಸವಕಲ್ಯಾಣ	–	ಟಿ. ಎಂ. ಸಿ.
4.	ಭಾಲ್ಕಿ	–	ಟಿ. ಎಂ. ಸಿ.
5.	ಚಿಟಗುಪ್ಪಾ	–	ಟಿ. ಎಂ. ಸಿ.

2. ಗುಲ್ಬರ್ಗಾ ಜಿಲ್ಲೆಯಲ್ಲಿ 1 ಸಿ.ಎಂ.ಸಿ ಮತ್ತು 7 ಟಿ.ಎಂ.ಸಿ ಗಳಿದ್ದು.
ಎವರ ಕೆಳಕಂಡಂತಿದೆ:

1.	ಶಹಬಾದ್	–	ಸಿ. ಎಂ. ಸಿ.
2.	ಆಳಂದ	–	ಟಿ. ಎಂ. ಸಿ.
3.	ಚಿತ್ತಾಪುರ	–	ಟಿ. ಎಂ. ಸಿ.
4.	ಸೇಡಂ	–	ಟಿ. ಎಂ. ಸಿ.
5.	ಶಹಾಪುರ	–	ಟಿ. ಎಂ. ಸಿ.
6.	ಶೋರಾಪುರ	–	ಟಿ. ಎಂ. ಸಿ.
7.	ವಾಡಿ	–	ಟಿ. ಎಂ. ಸಿ.
8.	ಯಾದಗೀರ್	–	ಟಿ. ಎಂ. ಸಿ.

ಅನುಬಂಧ

ಕ್ರಮ. ಸಂಖ್ಯೆ.	ಮಹಾನಗರ ಪಾಲಿಕೆಗಳು	ಜಿಲ್ಲೆ : ನಗರ ಸಭೆಗಳು	ಪುರ ಸಭೆಗಳು
1.		**ಬೆಂಗಳೂರು ನಗರ ಜಿಲ್ಲೆ :**	
1	ಬೆಂಗಳೂರು	ಬೊಮ್ಮನಹಳ್ಳಿ	ಅನೇಕಲ್
2		ಬ್ಯಾಟರಾಯನ ಪುರ	ಕೆಂಗೇರಿ
3		ದಾಸರ ಹಳ್ಳಿ	
4		ಕೆ. ಆರ್. ಪುರಂ	
5		ಪದ್ಮನಾಗೆರೆ	
7		ಯಲಹಂಕ	
2.		**ಬೆಂಗಳೂರು (ಗ್ರಾ) ಜಿಲ್ಲೆ**	
1		ಚನ್ನಪಟ್ಟಣ	ದೇವನಹಳ್ಳಿ
2		ದೊಡ್ಡಬಳ್ಳಾಪುರ	ಹೊಸಕೋಟೆ
3		ರಾಮನಗರ	ಕನಕಪುರ
4		ಮಾಗಡಿ	
5		ವಿಜಯಪುರ	
3.		**ತುಮಕೂರು ಜಿಲ್ಲೆ**	
1		ತುಮಕೂರು	ಚಿಕ್ಕನಾಯಕನ ಹಳ್ಳಿ
2			ಕುಣಿಗಲ್
3			ಮಧುಗಿರಿ
4			ಶಿರಾ
5			ತಿಪಟೂರು
4.		**ಕೋಲಾರ ಜಿಲ್ಲೆ**	
1		ಚಿಕ್ಕಬಳ್ಳಾಪುರ	ಗೌರಿಬಿದನೂರು
2		ಚಿಂತಾಮಣಿ	ಬಂಗಾರಪೇಟೆ
3		ಕೋಲಾರ	ಮಾಲೂರು
4		ರಾಬರ್ಟ್‌ಸನ್ ಪೇಟೆ	ಮುಳಬಾಗಿಲು
5			ಶಿಡ್ಲಘಟ್ಟ
5.		**ಚಿತ್ರದುರ್ಗ ಜಿಲ್ಲೆ**	
1		ಚಿತ್ರದುರ್ಗ	ಚಳ್ಳಕೆರೆ
2			ಹಿರಿಯೂರು
6.		**ದಾವಣಗೆರೆ ಜಿಲ್ಲೆ**	
1		ದಾವಣಗೆರೆ	
2		ಹರಿಹರ	

1		ದಾವಣಗೆರೆ	
2		ಹರಿಹರ	
7.	**ಮಂಡ್ಯ ಜಿಲ್ಲೆ**		
1		ಮಂಡ್ಯ	ಶ್ರೀರಂಗಪಟ್ಟಣ
2			ಮದ್ದೂರು
3			ಮಳವಳ್ಳಿ
8.	**ಚಾಮರಾಜನಗರ ಜಿಲ್ಲೆ**		
1		ಚಾಮರಾಜನಗರ	ಗುಂಡ್ಲುಪೇಟೆ
			ಕೊಳ್ಳೇಗಾಲ
9.	**ಶಿವಮೊಗ್ಗ ಜಿಲ್ಲೆ**		
1		ಭದ್ರಾವತಿ	ಸಾಗರ
		ಶಿವಮೊಗ್ಗ	ಶಿಕಾರಿಪುರ
10.		**ಮೈಸೂರು ಜಿಲ್ಲೆ**	
1	ಮೈಸೂರು		ಹುಣಸೂರು
2			ಕೆ. ಆರ್. ನಗರ
3			ನಂಜನಗೂಡು
11.	**ಕೊಡಗು ಜಿಲ್ಲೆ**		
1		ಮಡಿಕೇರಿ	
12.	**ಹಾಸನ ಜಿಲ್ಲೆ**		
1	ಹಾಸನ		ಅರಸೀಕೆರೆ
2			ಚನ್ನರಾಯಪಟ್ಟಣ
3			ಹೊಳೆನರಸೀಪುರ
4			ಸಕಲೇಶಪುರ
13.	**ಧಾರವಾಡ ಜಿಲ್ಲೆ**		
1	ಹುಬ್ಬಳ್ಳಿ–ಧಾರವಾಡ	ಅಣ್ಣಿಗೇರಿ	
14.	**ಚಿಕ್ಕಮಗಳೂರು ಜಿಲ್ಲೆ**		
1			ಬೀರೂರು
2			ಕಡೂರು
3			ತರೀಕೆರೆ
15.	**ಹಾವೇರಿ ಜಿಲ್ಲೆ**		
1		ರಾಣೆಬೆನ್ನೂರು	ಬ್ಯಾಡಗಿ
2		ಹಾವೇರಿ	ಸವಣೂರು
3			ಹಾನಗಲ್
16.	**ಉಡುಪಿ ಜಿಲ್ಲೆ**		

1		ಉಡುಪಿ	ಕಾರ್ಕಳ
2			ಕುಂದಾಪುರ
17.		**ದಕ್ಷಿಣ ಕನ್ನಡ ಜಿಲ್ಲೆ**	
1		ಮಂಗಳೂರು	
2.			ಮೂಡಬಿದ್ರೆ
3			ಪುತ್ತೂರು
18.		**ಗದಗ ಜಿಲ್ಲೆ**	
1		ಗದಗ-ಬೆಟಗೇರಿ	ನರಗುಂದ
2			ಗಜೇಂದ್ರಗಡ
3			ಲಕ್ಷ್ಮೇಶ್ವರ
19.		**ಉತ್ತರ ಕನ್ನಡ ಜಿಲ್ಲೆ**	
1		ಕಾರವಾರ	ಕುಮಟಾ
2		ಶಿರಸಿ	ಭಟ್ಕಳ
3		ದಾಂಡೇಲಿ	
20.		**ವಿಜಾಪುರ ಜಿಲ್ಲೆ**	
1		ವಿಜಾಪುರ	ಇಂಡಿ
2			ಮುದ್ದೇಬಿಹಾಳ್
3			ಸಿಂಧಗಿ
4			ತಾಳಿಕೋಟೆ
21.		**ಗುಲ್ಬರ್ಗಾ ಜಿಲ್ಲೆ**	
1	ಗುಲ್ಬರ್ಗಾ	ಶಹಾಬಾದ್	ಆಳಂದ್
2			ಚಿತ್ತಾಪುರ
3			ಸೇಡಂ
4			ಶಹಾಪುರ್
5			ಶೋರಾಪುರ್
6			ವಾಡಿ
7			ಯಾದಗಿರ್
22.		**ಬೀದರ್ ಜಿಲ್ಲೆ**	
1		ಬೀದರ್	ಬಸವಕಲ್ಯಾಣ
2			ಭಾಲ್ಕಿ
3			ಚಿಟಗುಪ್ಪ
4			ಹುಮ್ನಾಬಾದ್
23.		**ರಾಯಚೂರು ಜಿಲ್ಲೆ**	

1		ರಾಯಚೂರು	ಮಾನ್ವಿ
2			ಸಿಂಧನೂರು
24.		**ಬೆಳಗಾಂ ಜಿಲ್ಲೆ**	
1	ಬೆಳಗಾಂ	ನಿಪ್ಪಾಣಿ	ಆಥಣಿ
2		ಗೋಕಾಕ್	ಬೈಲಹೊಂಗಲ
3			ಚಿಕ್ಕೋಡಿ
4			ಮೂಡಲಗಿ
5			ರಾಮದುರ್ಗ
6			ಸಂಕೇಶ್ವರ
7			ಸವದತ್ತಿ
25.		**ಬಾಗಲಕೋಟೆ ಜಿಲ್ಲೆ**	
1		ಬಾಗಲಕೋಟೆ	ಜಮಖಂಡಿ
2		ರಬಕವಿ ಬನಹಟ್ಟಿ	ಮುಧೋಳ್
3			ಗುಳೇದಗುಡ್ಡ
4			ಇಳಕಲ್
5			ಮಹಲಿಂಗಪುರ
26.		**ಕೊಪ್ಪಳ ಜಿಲ್ಲೆ**	
1		ಗಂಗಾವತಿ	
2		ಕೊಪ್ಪಳ	
27.	**ಬಳ್ಳಾರಿ**	**ಬಳ್ಳಾರಿ ಜಿಲ್ಲೆ**	
1	ಹೊಸಪೇಟೆ		ಕಂಪ್ಲಿ

5729. (6629) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಪೊಲೀಸ್ ಸಿಬ್ಬಂದಿ ವರ್ಗದವರಿಗೆ ಸರ್ಕಾರ ಹಮ್ಮಿಕೊಂಡ ಕಲ್ಯಾಣ ಯೋಜನೆಗಳು ಯಾವುವು: ?

ಆ) ಸದರಿ ಯೋಜನೆಗಳ ಅನುಷ್ಠಾನಕ್ಕಾಗಿ ನಿಗದಿಪಡಿಸಿರುವ ಮೊತ್ತ ಎಷ್ಟು:

ಇ) 2004–05, 2005–06ನೇ ಸಾಲಿಗೆ ಅನ್ವಯವಾಗುವಂತೆ ನೀಡಿದ ಶೈಕ್ಷಣಿಕ ಸಹಾಯದ ಮೊತ್ತ ಎಷ್ಟು ಹಂಚಿಕೆ ಮಾಡಿದ ಜಿಲ್ಲಾವಾರು ವಿದ್ಯಾರ್ಥಿ ಸಂಖ್ಯೆ ಎಷ್ಟು:

ಈ) ಶೈಕ್ಷಣಿಕ ಸಹಾಯದ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ:

ಶ್ರೀ ಧರ್ಮಸಿಂಗ್, ಮಾನ್ಯ ಮುಖ್ಯಮಂತ್ರಿಗಳು